Vijayavani dt 11-01-2015

# ಅಡಕೆ ಬೆಳೆಗಾರರ ರಕ್ಷಣೆಗೆ ಕ್ರಮ

## ಸಿಪಿಸಿಆರ್ಐ ಕೃಷಿಮೇಳ ಉದ್ಘಾಟಿಸಿ ಕೇಂದ್ರ ಕಾನೂನು ಸಚಿವ ಡಿವಿಎಸ್

ವಿಟ್ಲ: ಅಡಕೆ ನಿಷೇಧಕ್ಕೆ ಕೇಂದ್ರ ಸರ್ಕಾರ ಆಸ್ಪದ ಕೊಡುವುದಿಲ್ಲ. ಅಡಕೆ ಆರೋಗ್ಯಕ್ಕೆ ಪೂರಕ ಎಂದು ಚೆನ್ನೈ ಮೆಡಿಕಲ್ ಸೆಂಟರ್ ವರದಿ ನೀಡಿದ್ದು, ಈಗಾಗಲೇ ಕೇಂದ್ರ ಆರೋಗ್ಯ, ಕೃಷಿ ಸಚಿವರೊಂದಿಗೆ ಚರ್ಚಿಸಲಾಗಿದೆ. ನ್ಯಾಯಾಲಯದಲ್ಲಿ ಅಡಕೆ ನಿಷೇಧ ದಾವೆ ಕುರಿತು ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಕೇಂದ್ರ ಕಾನೂನು ಸಚಿವ ಡಿ.ವಿ.ಸದಾನಂದ ಗೌಡ ಹೇಳಿದರು.

ವಿಟ್ಲ ಕೇಂದ್ರಿಯ ತೋಟದ ಬೆಳೆಗಳ ಸಂಶೋಧನಾ ಸಂಸ್ಥೆಯಲ್ಲಿ ಶನಿವಾರ ಕೃಷಿಮೇಳ-2015 ಉದ್ಘಾಟಿಸಿ ಮಾತನಾಡಿದರು.

ಅಧ್ಯಕ್ಷತೆ ವಹಿಸಿದ್ದ ಶಾಸಕಿ ಶಕುಂತಲಾ ಶೆಟ್ಟಿ ಮಾತನಾಡಿ, ಕೃಷಿ ರೋಗಗಳ ವಿಚಾರದಲ್ಲಿ ವಿಜ್ಞಾನಿಗಳಿಗಿಂತ ಕೃಷಿಕರಿಗೆ ಅಧಿಕ ಅನುಭವ ಮತ್ತು ಮಾಹಿತಿ ಇದ್ದು, ಸಂಶೋಧನೆಯಲ್ಲಿ ಅವರನ್ನೂ ತೊಡಗಿಸಿಕೊಳ್ಳುವ ಅವಶ್ಯಕತೆ ಇದೆ. ರಬ್ಬರ್ ಬೆಳೆಗಾರರು ರಬ್ಬರ್ ಶೀಟ್‌ಗಳ ಮೇಲೆ ಮಲಗುವ ಪರಿಸ್ಥಿತಿ ಉದ್ಭವಿಸಿದೆ. ಆಮದು ರಬ್ಬರಿಗೆ ಶೇ.70 ತೆರಿಗೆ ವಿಧಿಸುವ ಮೂಲಕ ರಬ್ಬರ್ ಬೆಳೆಗಾರರ ಹಿತಾಸಕ್ತಿ ಕಾಪಾಡಬೇಕು. ಅಡಕೆಗೆ 300 ರೂ.ಗಿಂತ ಧಾರಣೆ ಕಡಿಮೆಯಾಗದಂತೆ ನೋಡಿಕೊಳ್ಳಬೇಕೆಂದು ಸಚಿವರಲ್ಲಿ ಮನವಿ ಮಾಡಿದರು.

ಕ್ಯಾಂಪ್ಕೊ ಅಧ್ಯಕ್ಷ ಕೊಂಕೋಡಿ ಪದ್ಮನಾಭ ಮಾತನಾಡಿ, ಕೃಷಿಯಲ್ಲಿ ಯಂತ್ರ ಬಳಕೆ ಹೆಚ್ಚಬೇಕಿದ್ದು, ಈ ನಿಟ್ಟಿನಲ್ಲಿ ಹೆಚ್ಚು ಸಂಶೋಧನೆಗಳು ನಡೆಯಬೇಕು. ಕೇಂದ್ರದ ಸಹಕಾರ, ಕ್ಯಾಂಪ್ಕೊ ಶ್ರಮದಿಂದ ಅಡಕೆ ದರ ಸ್ಥಿರವಾಗಿದೆ. ರಬ್ಬರ್ ಬೆಳೆಗಾರರಲ್ಲಿರುವ ಆತಂಕ ನಿವಾರಣೆಗೆ ಕ್ರಮ ಕೈಗೊಳ್ಳಲಾಗಿದೆ. ನೀರಾ ಹುಳಿ ಬಂದಾಗ ಮಾತ್ರ ಶೇಂದಿಯಾಗುತ್ತದೆ. ಅದು ಕಲ್ಪರಸ, ಈ ಬಗ್ಗೆ ವಿಚಾರ ಸಂಕಿರಣ ಪುತ್ತೂರಿನ ಯಂತ್ರಮೇಳದಲ್ಲಿ ನಡೆಯಲಿದೆ ಎಂದರು. ಜಿಪಂ ಅಧ್ಯಕ್ಷೆ ಆಶಾ ತಿಮ್ಮಪ್ಪ, ಜಿಪಂ ಸದಸ್ಯೆ ಶೈಲಜಾ ಕೆ.ಟಿ. ಭಟ್, ವಿಟ್ಲ ಗ್ರಾಪಂ ಅಧ್ಯಕ್ಷೆ ಭವಾನಿ ರೈ ಕೊಲ್ಯ, ಶಿವಮೊಗ್ಗ ಮ್ಯಾಮ್ಕೋಸ್ ಉಪಾಧ್ಯಕ್ಷ ನರಸಿಂಹ ನಾಯಕ್, ಕೊಚ್ಚಿ ಗೇರು ಮತ್ತು ಕೊಕ್ಕೋ ಅಭಿವೃದ್ಧಿ ನಿರ್ದೇಶನಾಲಯದ ನಿರ್ದೇಶಕ ಡಾ. ವೆಂಕಟೇಶ್ ಎನ್. ಹುಬ್ಬಳ್ಳಿ, ಶ್ರೀಪಡ್ರೆ, ಅಖಿಲ ಭಾರತ ಅಡಕೆ ಬೆಳೆಗಾರರ ಒಕ್ಕೂಟದ ಅಧ್ಯಕ್ಷ ಮಂಚಿ ಶ್ರೀನಿವಾಸ ಆಚಾರ್, ಕೇರಳ ಅಡಕೆ ಮತ್ತು ಸಂಬಾರು ಬೆಳೆಗಳ ಉಪನಿರ್ದೇಶಕ ಬಾಬೂಲಾಲ್ ಮೀನ ಉಪಸ್ಥಿತರಿದ್ದರು.

ಕಾಸರಗೋಡು ಸಿಪಿಸಿಆರ್ಐ ನಿರ್ದೇಶಕ ಡಾ.ಪಿ.ಚೌಡಪ್ಪ ಸ್ವಾಗತಿಸಿದರು. ವಿಟ್ಲ ಸಿಪಿಸಿಆರ್ಐ ಮುಖ್ಯಸ್ಥ ಡಾ.ಕೆ.ಎಸ್.ಆನಂದ ವಂದಿಸಿದರು. ವಿಟ್ಲ ಸಿಪಿಸಿಆರ್ಐ ವಿಜ್ಞಾನಿ ಡಾ.ನಾಗರಾಜ್ ಕಾರ್ಯಕ್ರಮ ನಿರೂಪಿಸಿದರು.



ಕೇಂದ್ರ ಕಾನೂನು ಸಚಿವ ಡಿ.ವಿ. ಸದಾನಂದ ಗೌಡ ವಿಟ್ಲ ಕೇಂದ್ರಿಯ ತೋಟದ ಬೆಳೆಗಳ ಸಂಶೋಧನಾ ಸಂಸ್ಥೆಯಲ್ಲಿ ನಡೆದ ಕೃಷಿ ಮೇಳ 2015 ಕಾರ್ಯಕ್ರಮ ಉದ್ಘಾಟಿಸಿದರು.

> ಕಸ್ತೂರಿರಂಗನ್ ವರದಿ ವಿಚಾರದಲ್ಲಿ ಆತಂಕ ಅನಗತ್ಯ. ಗ್ರಾಮಗಳಿಂದ ರೈತರು, ತಜ್ಞರನ್ನು ಕರೆಸಿಕೊಂಡು ಚರ್ಚೆ ನಡೆಸಿ ಕೇಂದ್ರ ಸರ್ಕಾರಕ್ಕೆ ರಾಜ್ಯ ಶೀಘ್ರದಲ್ಲಿ ವರದಿ ನೀಡುವ ಕಾರ್ಯವಾಗಬೇಕು.
>
> । ಡಿ.ವಿ.ಸದಾನಂದ ಗೌಡ,
> ಕೇಂದ್ರ ಕಾನೂನು ಸಚಿವ

### ಪುರವಣಿಗಳ ಬಿಡುಗಡೆ

ಅಡಕೆಯಲ್ಲಿ ಕಾಲಬದ್ಧ ಕೃಷಿ ಚಟುವಟಿಕೆಗಳ ತಾಂತ್ರಿಕ ಪುರವಣಿ, ಅಡಕೆ ಕ್ಯಾಲೆಂಡರ್ ಇ-ತಾಂತ್ರಿಕ ಪುರವಣಿ, ಅಡಕೆ-ಅಣಬೆ ರೋಗ, ಸುಧಾರಿತ ತಳಿ ಮತ್ತು ಸಂಕರಣ, ಅಡಕೆ ಕಾಯಿಕೊಳೆರೋಗ, ಚಂಡೆ ಕೊಳೆರೋಗ ಮತ್ತು ಸುಳಿ ಕೊಳೆರೋಗ, ತೆಂಗಿನ ಸುಳಿ ಕೊಳೆರೋಗ, ಕಾಂಡ ಸೋರುವ ರೋಗ, ಸುತ್ತೋಲೆ ಬಿಡುಗಡೆ ಮಾಡಲಾಯಿತು.